


# ಪಂಢರಪುರದ ಇತಿಹಾಸ

ಪಂಢರಪುರದ ವಿಠಲ–ರುಕ್ಮಿಣಿ ಮಂದಿರವು 12ನೇ ಶತಮಾನಕ್ಕೆ ಹಿಂದೆ ನಿರ್ಮಾಣವಾಗಿದೆ ಎಂದು ಇತಿಹಾಸದ ಪುಟಗಳಿಂದ ತಿಳಿಯುತ್ತದೆ. ಹೊಯ್ಸಳ ಸಾಮ್ರಾಜ್ಯದ ಚಕ್ರವರ್ತಿ ವಿಷ್ಣುವರ್ಧನನ ಆಶ್ರಯದಲ್ಲಿ ಈ ದೇವಾಲಯ ನಿರ್ಮಿಸಲಾಗಿದೆ. ಬಳಿಕ ಈ ದೇವಾಲಯವು ಹಲವು ಬಾರಿ ನವೀಕರಣಕ್ಕೆ ಒಳಗಾಗಿದೆ. ಈ ದೇವಾಲಯವು ಡೆಕ್ಕನ್ ಮತ್ತು ಸಾಂಪ್ರದಾಯಿಕ ಮಹಾರಾಷ್ಟ್ರ ವಾಸ್ತುಶಿಲ್ಪ ಶೈಲಿಗಳ ಪರಿಪೂರ್ಣ ಮಿಶ್ರಣವಾಗಿದ್ದು, ವಾಸ್ತುಶಿಲ್ಪ ಮತ್ತು ಆಧ್ಯಾತ್ಮಿಕ ಭವ್ಯತೆಗೆ ಸಾಕ್ಷಿಯಾಗಿದೆ.

ಈ ದೇವಾಲಯವು ಹಲವು ದಂತಕಥೆಗಳಿಂದ ತುಂಬಿದೆ. ಅದರಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಪುಂಡಲೀಕ ಎಂಬ ಕಟ್ಟಾ ಭಕ್ತನ ಕಥೆ. ಪುಂಡಲೀಕನಿಗೆ ಹೆತ್ತವರ ಮೇಲಿನ ಅಚಲ ಸೇವೆಯು ಶ್ರೀಕೃಷ್ಣನನ್ನು ಮೆಚ್ಚಿಸಿತು. ಶ್ರೀಕೃಷ್ಣ ಒಮ್ಮೆ ಅವನ ಮುಂದೆ ಕಾಣಿಸಿಕೊಂಡಾಗ, ಪುಂಡಲೀಕನು ತನ್ನ ಹೆತ್ತವರನ್ನು ನೋಡಿಕೊಳ್ಳುತ್ತಿದ್ದ ಕಾರಣ ಭಗವಂತನಿಗೆ ನಿಲ್ಲಲು ಇಟ್ಟಿಗೆಯನ್ನು ಅರ್ಪಿಸಿದನು. ಅವನ ಭಕ್ತಿಗೆ ಮೆಚ್ಚಿದ ಕೃಷ್ಣನು ಆ ಭಂಗಿಯಲ್ಲಿಯೇ ನಿಂತಿದ್ದನು, ಇದರಿಂದಾಗಿ ದೇವರು ತನ್ನ ಸೊಂಟದ ಮೇಲೆ ಕೈಗಳನ್ನು ಇಟ್ಟುಕೊಂಡು ಇಟ್ಟಿಗೆಯ ಮೇಲೆ ನಿಂತಿರುವ ವಿಶಿಷ್ಟ ಚಿತ್ರಣವನ್ನು ಪಡೆದನು ಎಂದು ಹೇಳಲಾಗುತ್ತದೆ. ಈ ಕಾರಣಕ್ಕೆ ಪಂಢರಪುರದಲ್ಲಿ ಇಟ್ಟಿಗೆ ಮೇಲೆ ನಿಂತಿರುವ ಗೋಪಾಲನನ್ನು 'ವಿಠಲ' ಎಂದು ಕರೆಯುತ್ತಾರೆ ಎಂಬ ಪೌರಾಣಿಕ ದಂತಕಥೆ ಪ್ರಚಲಿತವಾಗಿದೆ.

ಈ ದೇವಾಲಯವನ್ನು ಸಂಕೀರ್ಣವಾಗಿ ಕೆತ್ತಲಾಗಿದೆ. ವಿಸ್ತಾರವಾದ ಅಂಗಳಗಳು ಮತ್ತು ಎತ್ತರದ ದ್ವಾರಗಳನ್ನು ಹೊಂದಿರುವ ವಿಸ್ಮಯಕಾರಿ ರಚನೆಯಾಗಿದೆ. ನಾಮದೇವ ಮಹಾದ್ವಾರ ಎಂದು ಕರೆಯುವ ಮುಖ್ಯ ದ್ವಾರದ ಮೂಲಕ ಯಾತ್ರಿಕರು ಗರ್ಭಗುಡಿ ಒಳಗೆ ಪ್ರವೇಶಿಸಬಹುದಾಗಿದೆ. ಒಳಗೆ ಹೆಜ್ಜೆ ಹಾಕುತ್ತಿದ್ದಂತೆ ಭಕ್ತಿ ಚಳವಳಿಯ ಸಂತರ ದರ್ಶನವಾಗುತ್ತದೆ. ಬಳಿಕ ಗರ್ಭಗುಡಿಯಲ್ಲಿ ಆಭರಣಗಳಿಂದ ಅಲಂಕರಿಸಲಾಗಿರುವ ಭಗವಾನ್ ವಿಠಲನ ಕಪ್ಪು ಕಲ್ಲಿನ ವಿಗ್ರಹ ದರ್ಶನವಾಗುತ್ತದೆ. ಜೊತೆಗೆ ರುಕ್ಮಿಣಿ, ಗಣೇಶ, ಹನುಮಾನ್ ಮತ್ತು ದತ್ತಾತ್ರೇಯರ ಸಣ್ಣ ದೇವಾಲಯಗಳನ್ನು ಕಾಣಬಹುದಾಗಿದೆ.

### ವಿಠಲ ಪಠಣದಿಂದ ಮನ ಹಗುರ

ವಿಠಲ ನಾಮ ಸ್ಮರಣೆಯಲ್ಲಿ ದೊಡ್ಡ ಶಕ್ತಿ ಇದೆ ಎಂದು ಅನಾದಿ ಕಾಲದಿಂದಲೂ ನಂಬಲಾಗಿದೆ. 'ವಿಠಲ' ಎಂಬ ಪದವನ್ನು ನಿರಂತವಾಗಿ ಪಠಿಸುವುದರಿಂದ ಹೃದಯ ಸಂಬಂಧಿ ಕಾಯಿಲೆಗಳು ದೂರವಾಗುತ್ತವೆ, ತನುಮನವೆಲ್ಲ ಹಗುರಾಗುತ್ತದೆ ಎಂದೂ ಹೇಳಲಾಗುತ್ತಿದೆ. ಪಂಢರಪುರದಲ್ಲಿ ವಿಠಲನ ಭಕ್ತರು ನುಡಿಸುವ ತಾಳ, ಮೃದಂಗದ ನಿನಾದಕ್ಕೆ ಕಿವಿಯಾಗುವುದೇ ಪರಮಾನಂದ.

ಯಾತ್ರಿಕರಿಗೆ ಉಚಿತ ಪ್ರಸಾದ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿರುತ್ತದೆ. ಚಂದ್ರಭಾಗ ನದಿ ತೀರದಲ್ಲಿ ಭಕ್ತರು ಪುಣ್ಯಸ್ನಾನ ಮಾಡಲು ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಭಕ್ತರು ವಿಠಲ–ರುಕ್ಮಿಣಿಯರ ದರ್ಶನದ ಬಳಿಕ ಸಿಹಿ ತಿನಿಸು, ದೇವರ ಮೂರ್ತಿ, ಪೂಜಾ ಸಾಮಗ್ರಿ, ಮಕ್ಕಳ ಆಟಿಕೆಗಳನ್ನು ಖರೀದಿಸಿ, ಸಂತಸದಿಂದ ಮನೆಗೆ ಮರಳುತ್ತಾರೆ.

### ಪಂಢರಪುರ ವಾರಿ ತೀರ್ಥಯಾತ್ರೆ

ಪಂಢರಪುರ ದೇವಸ್ಥಾನವು ವರ್ಷದಲ್ಲಿ ನಾಲ್ಕು ಪ್ರಮುಖ ಧಾರ್ಮಿಕ ಯಾತ್ರೆಗಳನ್ನು ಆಯೋಜಿಸುತ್ತದೆ. ಈ ನಾಲ್ಕು ಯಾತ್ರೆಗಳಲ್ಲಿ ಮೂರು ಆಷಾಢ ಯಾತ್ರೆ, ಕಾರ್ತೀಕ ಯಾತ್ರೆ, ಮಾಘ ಮತ್ತು ಚೈತ್ರ ಏಕಾದಶಿಗಳು ವಾರ್ಷಿಕವಾಗಿ ಆಚರಿಸಲಾಗುವ ಮೆರವಣಿಗೆ ಉತ್ಸವಗಳಾಗಿವೆ.

ಆಷಾಢ ಮತ್ತು ಚೈತ್ರ ಯಾತ್ರೆಯಲ್ಲಿ ಸಹಸ್ರಾರು ಭಕ್ತರು ಭಾಗವಹಿಸುವುದರಿಂದ ಹೆಚ್ಚು ಜನಪ್ರಿಯವಾಗಿದೆ. ಪಂಢರಪುರ ಪಾಲ್ಕಿ